# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-04

Cw-11

| | |
|---|---|
| ಸಾಕ್ಷಿದಾರರ ಹೆಸರುಃ | ಗುತ್ತಪ್ಪ ಕಟ್ಟೀಮನಿ |
| ತಂದೆಃಗಂಡನ ಹೆಸರುಃ | ಗುಡ್ಡಪ್ಪ |
| ವಯಸ್ಸುಃ | 28 ವರ್ಷ |
| ಉದ್ಯೋಗಃ | ಕೂಲಿ |
| ವಾಸ ಸ್ಥಳಃ | ಹಾವೇರಿ |

**ದಿನಾಂಕ:29.08.2024 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಮೃತ ಗಣೇಶ, ಮೃತ ನಿಂಗಪ್ಪ ಮತ್ತು ಆರೋಪಿಗಳು ಗೊತ್ತು. ನಿಂಗಪ್ಪ, ನಾನು ಎಪಿಎಂಸಿಯಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದೆವು. ಶಂಭುಲಿಂಗನದ್ದು ಲಾರಿ ಇದೆ. ಮಂಜುನಾಥ ಲಾರಿ ಚಾಲಕ. 1 ನೇ ಆರೋಪಿ ಮಳಿಮಠ ಅವರ ಮನೆಯಲ್ಲಿ ರೂಂ ಮಾಡಿಕೊಂಡಿದ್ದ. ಅಲ್ಲಿ ನಿಂಗಪ್ಪ ಮತ್ತು ಗಣೇಶ ಮಲಗುತ್ತಿದ್ದರು. 1 ನೇ ಆರೋಪಿ ಮತ್ತು ನಿಂಗಪ್ಪನ ನಡುವೆ ಆಗ್ಗಾಗ್ಗೆ ಗಲಾಟೆಯಾಗುತಿತ್ತು. ಈಗ್ಗೆ 2½ ವರ್ಷಗಳ ಹಿಂದೆ ಆರೋಪಿಗಳು ನಿಂಗಪ್ಪ ಮತ್ತು ಗಣೇಶನನ್ನು ರಾಡು, ವೀಲ್ ಪಾನ, ಡಂಬಲ್ಸ ನಿಂದ ಹೊಡೆದು ಕೊಲೆ ಮಾಡಿದ್ದಾರೆ ಅಂತಾ ಗೊತ್ತಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

ಪೊಲೀಸರು ನನ್ನ ಹೇಳಿಕೆ ತೆಗೆದುಕೊಂಡಿದ್ದಾರೆ. 02 ವರ್ಷಗಳ ಹಿಂದೆ ಹೇಳಿಕೆ

ತೆಗೆದುಕೊಂಡಿದ್ದಾರೆ. ನಿಂಗಪ್ಪ ಮತ್ತು ಗಣೇಶ ಯಾವ ರೀತಿ ಸತ್ತರು ಅಂತಾ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ಆರೋಪಿ ಮತ್ತು ನಿಂಗಪ್ಪನ ನಡುವೆ ಹಣಕಾಸಿನ ವಿಚಾರವಾಗಿ ಗಲಾಟೆಯಾಗುತ್ತಿತ್ತು ಅಂತಾ ಪೊಲೀಸರಿಗೆ ಹೇಳಿಲ್ಲ. ಎಷ್ಟು ಹಣ ತೆಗೆದುಕೊಂಡಿದ್ದರು ಅಂತಾ ನನಗೆ ಗೊತ್ತಿಲ್ಲ.

ಬೆಳಿಗ್ಗೆ 10.00 ಗಂಟೆಯಿಂದ ಸಂಜೆಯವರೆಗೆ ಹಮಾಲಿ ಕೆಲಸ ಮಾಡುತ್ತೇವೆ. ನಿಂಗಪ್ಪನ ಮೇಲೆ ಹಾವೇರಿ ಮತ್ತು ರಾಣೇಬೆನ್ನೂರು ಠಾಣೆಯಲ್ಲಿ ಕೇಸು ಆಗಿತ್ತು ಎಂದರೆ ಗೊತ್ತಿಲ್ಲ. ನಿಂಗಪ್ಪನಿಗೆ ಶಿಕ್ಷೆಯಾಗಿತ್ತು ಎಂದರೆ ಗೊತ್ತಿಲ್ಲ. ನಿಂಗಪ್ಪನದು ಹಾವೇರಿಯಲ್ಲಿ ಮನೆ ಇದೆ. ನಾನು ಹೊಡೆದಿದ್ದನ್ನು ಕಣ್ಣಾರೆ ಕಂಡಿಲ್ಲ. ನನಗೆ ಗೊತ್ತಾದ ಮೇಲೆ ಪೊಲೀಸರಿಗೆ ವಿಷಯ ತಿಳಿಸಿಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ಸಹ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳಿದ್ದೇನೆಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಂಗಪ್ಪನಿಗೆ ಬೇರೆ-ಬೇರೆ ಕಡೆ ವೈರಿಗಳು ಇದ್ದರು ಎಂದರೆ ಸರಿಯಲ್ಲ. ಬೇರೆ-ಬೇರೆಯವರಿಗೆ ಹೆದರಿಸಿ ರೊಕ್ಕ ಮಾಡುತ್ತಿದ್ದ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.